

## ಉತ್ತಮ ಸ್ಕ್ರಿಪ್ಟ್ ನನ್ನ ಆಯ್ಕೆ: ಧೀರೆನ್

‘ಶಿವ 143’ ಸಿನಿಮಾ ಮೂಲಕ ಕನ್ನಡ ಸಿನಿಮಾರಂಗದಲ್ಲಿ ಅದೃಷ್ಟ ಪರೀಕ್ಷೆ ನಡೆಸಿದ್ದ ಧೀರೆನ್ ರಾಜ್‌ಕುಮಾರ್, ಕ್ರೈಂ ಥ್ರಿಲ್ಲರ್ ಕಥಾಹಂದರದ ಸಿನಿಮಾಗೆ ಕೈಜೋಡಿಸಿದ್ದಾರೆ.

‘ನನ್ನ ಸಾಮರ್ಥ್ಯವನ್ನು ತೋರುವ ಹಾಗೂ ಕಲಾವಿದನಾಗಿ ನನಗೆ ಸವಾಲಾಗುವಂಥ ಉತ್ತಮ ಸ್ಕ್ರಿಪ್ಟ್ ನನ್ನ ಆಯ್ಕೆಯಾಗಿರುತ್ತದೆ. ಎರಡನೇ ಸಿನಿಮಾ ಯಾವುದೇ ನಟರಿಗೂ ನಿರ್ಣಾಯಕವಾಗಿರುತ್ತದೆ. ಎರಡನೇ ಸಿನಿಮಾದಲ್ಲಿ ನಮ್ಮ ಕೌಶಲವನ್ನು ಸಾಬೀತುಪಡಿಸಿಕೊಳ್ಳಬೇಕಾಗುತ್ತದೆ. ಅದಕ್ಕೆ ತಕ್ಕ ಕಥೆಯೇ ನನ್ನ ಆದ್ಯತೆ’ ಎಂದು ತಮ್ಮ ಮುಂದಿರುವ ಸವಾಲಿನ ಬಗ್ಗೆ ಈಚೆಗೆ ಮಾತನಾಡಿದ್ದಾರೆ.

‘ಶಾಖಾಹಾರಿ’ ಸಿನಿಮಾ ನಿರ್ದೇಶಕ ಸಂದೀಪ್ ಸುಂಕದ್ ಧೀರೆನ್‌ಗೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ.

“ಸಂದೀಪ್ ಈ ಕಥೆ ಹೇಳುತ್ತಿದ್ದಂತೆ ನನ್ನೊಳಗೆ ಇದನ್ನು ಮಾಡಲೇಬೇಕೆಂದು ಅನಿಸಿತು. ಅವರ ನಿರ್ದೇಶನದ ‘ಶಾಖಾಹಾರಿ’ ಸಿನಿಮಾ ಸಾಕಷ್ಟು ಜನಪ್ರಿಯತೆ ಗಳಿಸಿದೆ. ಅದರಲ್ಲೂ ಒಟಿಟಿಯಲ್ಲಿ ಬಹಳ ಒಳ್ಳೆಯ ಪ್ರತಿಕ್ರಿಯೆ ಪಡೆದುಕೊಂಡಿದೆ. ಈ ಪ್ರಾಜೆಕ್ಟ್ ಜೊತೆ ನಾವಿಬ್ಬರೂ ಪ್ರೇಕ್ಷಕರಿಗೆ ಅಚ್ಚರಿ ನೀಡಲಿದ್ದೇವೆ” ಎಂದಿದ್ದಾರೆ.

‘ಕಂಟೆಂಟ್ ಆಧರಿತ ಸಿನಿಮಾ ಇದಾಗಿದೆ. ಶಿವಣ್ಣ ಬೆಂಬಲ ಸಿಕ್ಕಿರುವುದು ನನಗೆ ದೊಡ್ಡ ಆಶೀರ್ವಾದ. ನಾನು ಕಲ್ಪನೆ ಮಾಡಿಕೊಂಡಿದ್ದಕ್ಕಿಂತ ದೊಡ್ಡ ಬೆಂಬಲ ನನಗೆ ದೊರೆಯುತ್ತಿದೆ’ ಎಂದಿದ್ದಾರೆ ಧೀರೆನ್.

# ಕಾಜಲ್ ಬದುಕಲ್ಲಿ ಬೆಳ್ಳಿಚುಕ್ಕಿ



‘ಪೆಪೆ’, ‘ಮೇಘ’, ‘ಲೈನ್‌ಮ್ಯಾನ್’ ಸಿನಿಮಾಗಳ ಮೂಲಕ ಗುರುತಿಸಿಕೊಂಡಿದ್ದ ನಟಿ ಕಾಜಲ್ ಕುಂದರ್ ಅವರ ಮುಂದೀಗ ಹಲವು ಅವಕಾಶಗಳು ಎಡತಾಕುತ್ತಿವೆ. ಈ ಅವಕಾಶಗಳು ತಮ್ಮ ಪಾಲಿಗೆ ಬಂದಿದ್ದರ ಕುರಿತು ಸಂತೋಷ ವ್ಯಕ್ತಪಡಿಸಿರುವ ಅವರು, ಅಷ್ಟೇ ಜವಾಬ್ದಾರಿಯಿಂದ ಸಿನಿಮಾಗಳಲ್ಲಿ ತೊಡಗಿಕೊಳ್ಳುವುದಾಗಿ ಹೇಳಿದ್ದಾರೆ.

‘ಮಾಯಾ ಕನ್ನಡಿ’ ಸಿನಿಮಾ ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸಿದ್ದ ಕಾಜಲ್, ‘ಬಾಂಡ್ ರವಿ’, ‘ಕೆಟಿಎಂ’ ಸಿನಿಮಾಗಳಲ್ಲಿ ನಟಿಸಿದ್ದರು. ವಿನಯ್ ರಾಜಕುಮಾರ್ ಅವರೊಂದಿಗೆ ‘ಪೆಪೆ’ ಸಿನಿಮಾದಲ್ಲಿ ಕಾಣಿಸಿಕೊಂಡಿದ್ದರು. ‘ಮೇಘ’, ಅವರ ಈಚಿನ ಸಿನಿಮಾ. ಸಿನಿಮಾರಂಗಕ್ಕೆ ಬಂದು ಹಲವು ವರ್ಷಗಳು ಕಳೆದಿದ್ದರೂ ತೆರೆಮರೆಯಲ್ಲೇ ಉಳಿದಿದ್ದ ಅವರ ಹಾದಿ ಈಗ ತೆರೆದುಕೊಂಡಿರುವುದಾಗಿ ಸಂತಸದಿಂದ ಹೇಳಿಕೊಳ್ಳುತ್ತಾರೆ.

‘ಸಿನಿಮಾರಂಗದಲ್ಲಿ ಈಗಷ್ಟೇ ನಾನು ಗುರುತಿಸಿಕೊಳ್ಳುತ್ತಿದ್ದೇನೆ. ನಾವು ಯಾವಾಗಲೂ ನಿರೀಕ್ಷೆಗಳನ್ನು ಇಟ್ಟುಕೊಂಡೇ ಇರುತ್ತೇವೆ. ಅಂದುಕೊಂಡಂತೆ ನಮ್ಮ ಯೋಜನೆಗಳು ನಡೆಯುವುದಿಲ್ಲ. ಫಲಿತಾಂಶದ ಬಗ್ಗೆ ನನಗೆ ಸದಾ ಆತಂಕ ಇದ್ದೇ ಇರುತ್ತಿತ್ತು. ಈ ಅವಧಿಯಲ್ಲಿ ಹಲವು ಪಾಠಗಳನ್ನು ಕಲಿತಿದ್ದೇನೆ. ಸದ್ಯ ಈಗಿರುವ ಪ್ರಾಜೆಕ್ಟ್‌ಗಳ ಮೇಲೆ ಗಮನ ಕೇಂದ್ರೀಕರಿಸಿದ್ದೇನೆ. ಎಲ್ಲವನ್ನೂ ಪಾಸಿಟಿವ್ ಮೈಂಡ್‌ಸೆಟ್‌ನಲ್ಲೇ ತೆಗೆದುಕೊಳ್ಳುತ್ತಿದ್ದೇನೆ’ ಎಂದಿದ್ದಾರೆ.

ಸಮಕಾಲೀನದ ಜೊತೆಗೆ ರಿಯಲಿಸ್ಟಿಕ್ ಅಂಶವಿರುವ, ಸಾರವಿರುವ ಕಥೆಗಳಲ್ಲಿ ಪಾತ್ರ ನಿರ್ವಹಣೆ ಮಾಡುವ ಅಭಿಲಾಷೆ ವ್ಯಕ್ತಪಡಿಸಿದ್ದು, ಆ ಆಸೆ ಸಿನಿಮಾವೊಂದರ ಮೂಲಕ ಕೈಗೂಡುತ್ತಿರುವುದಾಗಿ ಹೇಳುತ್ತಾರೆ.

‘ಬಿಳಿ ಚುಕ್ಕಿ ಹಳ್ಳಿ ಹಕ್ಕಿ’ ಎಂಬ ಸಿನಿಮಾದಲ್ಲಿ ಕಾಜಲ್ ನಟಿಸುತ್ತಿದ್ದು, ತೊನ್ನಿನ ಸಮಸ್ಯೆ ಕುರಿತ ಈ ಸಿನಿಮಾ ರಿಯಲಿಸ್ಟಿಕ್ ಹಾಗೂ ಸ್ಪಂದನಾಶೀಲವಾಗಿರುವುದಾಗಿ ಹೇಳಿದ್ದಾರೆ. ‘ಔಟ್ ಆಫ್ ದಿ ಬಾಕ್ಸ್ ಕಥೆ ಇದಾಗಿದ್ದು, ತಕ್ಷಣವೇ ಈ ಪ್ರಾಜೆಕ್ಟ್ ಒಪ್ಪಿಕೊಂಡೆ. ನಿರ್ದೇಶಕರ ವೈಯಕ್ತಿಕ ಅನುಭವದಲ್ಲಿ ಸಿನಿಮಾ ಮೂಡಿಬಂದಿದೆ’ ಎಂದಿದ್ದಾರೆ.

ಕನ್ನಡ ಸಿನಿಮಾರಂಗದಲ್ಲಿ ಸದ್ಯ ಇಂಥ ಪ್ರಯೋಗಗಳು ನಡೆಯುತ್ತಿದ್ದು, ಆ ಪ್ರಯೋಗಗಳಲ್ಲಿ ತಮ್ಮನ್ನೂ ಒಳಗೊಳ್ಳುವ ಆಸೆ ವ್ಯಕ್ತಪಡಿಸಿದ್ದಾರೆ.